


ರಶ್ಮಿ ಕೆ.

# ಒಂದು ಗುಂಡು, ಅದೇ ಕಥೆ, ಅದೇ ವ್ಯಥೆ

**‘ಭಗವಾನ್ಡೆ ಮರಣಂ’**
(ಮಲಯಾಳಂ ಕಥಾಸಂಕಲನ)
ಲೇ: ಕೆ.ಆರ್. ಮೀರಾ
ಪು: 120, ಬೆ: ₹ 125
ಪ್ರ: ಡಿ.ಸಿ. ಬುಕ್ಸ್, ಕೊಟ್ಟಾಯಂ

ಮಲಯಾಳಂನ ‘ಭಗವಾನ್ಡೆ ಮರಣಂ’ ಕಥಾಸಂಕಲನ ತನ್ನ ಮುಖಪುಟದಿಂದಲೇ ಓದುಗನ ಗಮನಸೆಳೆಯುತ್ತದೆ. ಈ ಮುಖಪುಟವೇ ಒಂದು ಕತೆಯಂತಿದೆ. ಪುಸ್ತಕದ ಹಣೆಯ ಭಾಗದಲ್ಲಿ ಗುಂಡೊಂದು ತೂರಿಹೋಗಿದೆ. ಗುಂಡು ಹೊಕ್ಕ ಉದ್ದಕ್ಕೂ ಆಳಗಾಯ, ರಕ್ತದ ಕಲೆ. ಪುಸ್ತಕದ ಯಾವ ಪುಟ ತೆರೆದರೂ ಗುಂಡು ಉಂಟುಮಾಡಿದ ರಂಧ್ರವಿದೆ. ಈ ರಂಧ್ರದೊಂದಿಗೇ ಪುಸ್ತಕದ ವಿನ್ಯಾಸ ರೂಪುಗೊಂಡಿದೆ.

‘ಈ ಕಥಾಸಂಕಲನದಲ್ಲಿರುವ ಕತೆಗಳು ಕಾಲ್ಪನಿಕ. ಯಾವುದೇ ಬದುಕಿರುವ ವ್ಯಕ್ತಿ ಅಥವಾ ತೀರಿಕೊಂಡ ವ್ಯಕ್ತಿಯೊಂದಿಗೆ ಹೋಲಿಕೆಯಾಗುತ್ತಿದ್ದರೆ ಅದು ನಾವು ಬದುಕಿರುವ ಕಾಲಘಟ್ಟದ ಭೀಕರತೆಯಿಂದ ಮಾತ್ರವಾಗಿದೆ’ ಎನ್ನುತ್ತಾರೆ ಸಂಕಲನದ ಕತೆಗಾರ್ತಿ ಕೆ.ಆರ್. ಮೀರಾ. ಆರು ಕತೆಗಳ ಈ ಗುಚ್ಛ ಸಮಕಾಲೀನ ಸಂಗತಿಗಳನ್ನು ನೆನಪಿಸುವುದರೊಂದಿಗೆ, ಇಲ್ಲಿ ಯಾವುದು ಕಲ್ಪನೆ ಹಾಗೂ ಯಾವುದು ವಾಸ್ತವ ಎನ್ನುವುದನ್ನು ಓದುಗರೇ ನಿರ್ಣಯಿಸಬೇಕಾಗುತ್ತದೆ.

ಮೀರಾ ಅವರ ಮಾತಿನೊಂದಿಗೆ ಸಂಕಲನದ ಶೀರ್ಷಿಕೆ ಕತೆಯಾದ, ಭಗವಂತನಿಗೆ ಸಾವಿದೆಯೇ